ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಮಂಗಳವಾರ, ದಿನಾಂಕ : 10 ನೇ ಮಾರ್ಚ್, 2020

ರೈತರ ಸಾಲಮನ್ನಾ ಯೋಜನೆ ಬಗ್ಗೆ

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

532 (780) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಿಂದಿನ ಸರ್ಕಾರದ ಅವಧಿಯ 2017-18ನೇ ಸಾಲಿನಲ್ಲಿ ಸಾಲಮನ್ನಾ ಯೋಜನೆಯಲ್ಲಿ ಅರ್ಹತೆ ಹೊಂದಿರುವ ರೈತರಿದ್ದರೂ ಸಹ ಅವರುಗಳಲ್ಲಿರುವ ದಾಖಲಾತಿಗಳಲ್ಲಿ ಹೆಸರುಗಳ ನ್ಯೂನತೆ ಹೆಸರು ತಿದ್ದುಪಡಿ, ಆರ್.ಟಿ.ಸಿ.ಯಲ್ಲಿನ ಹೆಸರು ನ್ಯೂನತೆ, ರೇಷನ್‌ಕಾರ್ಡ್ ಮತದಾರರ ಗುರುತಿನಚೀಟಿ, ಆಧಾರ್ ಕಾರ್ಡ್, ಪಾನ್‌ಕಾರ್ಡ್, ಬ್ಯಾಂಕ್ ಪುಸ್ತಕ ಇತ್ಯಾದಿಗಳ ಸಮಸ್ಯೆಯಿಂದ ಈ ಯೋಜನೆಯಿಂದ ವಂಚಿತರಾಗಿರುವ ರೈತರ ಸಂಖ್ಯೆ ಎಷ್ಟು ಮತ್ತು ಮೊತ್ತವೆಷ್ಟು;

(ಆ) ಇಂತಹ ರೈತರಿಗೆ ಸಾಲಮನ್ನಾ ಯೋಜನೆ ಕಲ್ಪಿಸುವ ಸಂಬಂಧ ಸರ್ಕಾರ ಕೈಗೊಂಡ ನಿಲುವೇನು; (ವಿವರ ನೀಡುವುದು)

(ಇ) ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಸಾಲಮನ್ನಾ ಯೋಜನೆಯಲ್ಲಿ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳಿಂದ ಸೌಲಭ್ಯ ಪಡೆದ ರೈತರ ಸಂಖ್ಯೆ ಎಷ್ಟು ಮತ್ತು ಮೊತ್ತವೆಷ್ಟು;

(ಈ) ಸಾಲಮನ್ನಾ ಯೋಜನೆಯಡಿ ದಾಖಲಾತಿಗಳ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುವ ರೈತರ ಸಂಖ್ಯೆ ಎಷ್ಟು; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)